ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.

ಸಿ.ಸಿ.1085/2025

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಜೆ.ಎಸ್.ತಿಪ್ಪೇಸ್ವಾಮಿ | ಪಿ.ಡಬ್ಲ್ಯೂ.5 |
| ತಂದೆಯ ಹೆಸರು | : | ಲೇಟ್ ಸಣ್ಣ ನುಂಕಪ್ಪ | ಸಿ.ಡಬ್ಲ್ಯೂ.9 |
| ವಯಸ್ಸು | : | 54 ವರ್ಷ | |
| ವೃತ್ತಿ | : | ಡಿ.ವೈ.ಎಸ್.ಪಿ. ಸಿ.ಸಿ.ಪಿ.ಎಸ್ ಪೊಲೀಸ್ ಠಾಣೆ | |
| ವಾಸ | : | ಚಿಕ್ಕಮಗಳೂರು | |

ದಿನಾಂಕಃ 20-01-2026 ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಅಭಿಯೋಜನೆ ಪರ ಮಾನ್ಯ ಎಪಿಪಿ ರವರಿಂದಃ-

ನಾನು ದಿಃ12.03.2025 ರಿಂದ ಇಲ್ಲಿಯವರೆಗೂ ಚಿಕ್ಕಮಗಳೂರು ಸಿ.ಇ.ಎನ್ ಪೊಲೀಸ್ ಠಾಣೆಯಲ್ಲಿ ಡಿ.ವೈ.ಎಸ್.ಪಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ29.03.2025 ರಂದು ಚಾಸಾ-1 ರವರು ನೀಡಿದ ವರದಿ ಮತ್ತು ಸ್ವತ್ತುಗಳನ್ನು ಸ್ವೀಕರಿಸಿಕೊಂಡು ಪರಿಶೀಲನೆ ಮಾಡಿರುತ್ತೇನೆ. ಅವರು ಹಾಜರುಪಡಿಸಿದ ಸ್ವತ್ತುಗಳನ್ನು ಠಾಣಾ ಮಾಲುಪಟ್ಟಿಯಲ್ಲಿ ಅಳವಡಿಸಿಕೊಂಡಿರುತ್ತೇನೆ. ನಂತರ ದಿಃ30.03.2025 ರಂದು ಪ್ರಕರಣದ ದಾಳಿಯ ವೇಳೆಯಲ್ಲಿ ತೆಗೆದ ಫೋಟೋವನ್ನು ಸಿ.ಡಿ. ಗೆ ವರ್ಗಾಯಿಸಿದ ಬಗ್ಗೆ ಚಾಸಾ-4 ರವರು ನೀಡಿದ 65(ಬಿ) ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ.

ವರದಿಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-10 ಎಂದು ಗುರುತಿಸಲಾಗಿದ್ದು ನನ್ನ ಸಹಿ ನಿಪಿ-10(ಬಿ) ಇರುತ್ತದೆ. ಫೋಟೋವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿರುತ್ತದೆ. ಸಿ.ಡಿ ಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಗಿರುತ್ತದೆ. 65(ಬಿ) ಪ್ರಮಾಣ ಪತ್ರವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-7 ಎಂದು ಗುರುತಿಸಲಾಗಿದ್ದು ನನ್ನ ಸಹಿ ನಿಪಿ-7(ಬಿ) ಇರುತ್ತದೆ.

ದಿಃ02.04.2025 ರಂದು ಚಾಸಾ-2 ರಿಂದ 6 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿಃ16.04.2025 ರಂದು ಅಮಾನತ್ತುಪಡಿಸಿದ ಮದ್ಯವನ್ನು ತಜ್ಞರ ಪರೀಕ್ಷೆ ಬಗ್ಗೆ ಚಾಸಾ-4 ರವರ ಮೂಲಕ ಕಳುಹಿಸಿಕೊಟ್ಟಿರುತ್ತೇನೆ. ದಿಃ25.05.2025 ರಂದು ಎಫ್.ಎಸ್.ಎಲ್ ವರದಿಯನ್ನು ಪಡೆದಿರುತ್ತೇನೆ. ಸದರಿ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ-11 ಎಂದು ಗುರುತಿಸಲಾಗಿ ನನ್ನ ಸಹಿ ನಿಪಿ-11(ಎ) ಇರುತ್ತದೆ. ಮನವಿಯನ್ನು ನೋಡುತ್ತಿದ್ದು ಅದನ್ನು ನಿಪಿ-12 ಎಂದು ಗುರುತಿಸಲಾಗಿ ನನ್ನ ಸಹಿ ನಿಪಿ-12(ಎ) ಇರುತ್ತದೆ. ಅದೇ ದಿನ ಆರೋಪಿಯು ನಿರೀಕ್ಷಣಾ ಜಾಮೀನಿನೊಂದಿಗೆ ಠಾಣೆಗೆ ಹಾಜರಾಗಿದ್ದವನನ್ನು ಸೂಕ್ತ ಜಾಮೀನು ಪಡೆದುಕೊಂಡು ಬಿಟ್ಟಿರುತ್ತೇನೆ. ಚಾಸಾ-2 ಮತ್ತು ಚಾಸಾ-3 ರವರು ನನ್ನ ಮುಂದೆ ನಿಪಿ-3 ಮತ್ತು 4 ರಂತೆ ಹೇಳಿಕೆಯನ್ನು ನೀಡಿರುತ್ತಾರೆ. ನಂತರ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಯ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತೇನೆ

ಈ ದಿನ ನ್ಯಾಯಾಲಯದ ಮುಂದೆ ಇರುವ ಮು.ಮಾ.1 ಮತ್ತು 2 ನ್ನು ನೋಡಿ ಗುರುತಿಸುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-

ಸಿ.ಇ.ಎನ್ ಪೊಲೀಸ್ ಠಾಣೆಯಲ್ಲಿ ನನ್ನ ಕಛೇರಿ ಇರುತ್ತದೆ. ದಿಃ28.03.2025 ರಂದು ನಾನು ಕರ್ತವ್ಯದಲ್ಲಿ ಇದ್ದೆನು. ಶೋಧನಾ ವಾರೆಂಟನ್ನು ನಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಡಿ.ವೈಎಸ್.ಪಿ ರವರು ನೀಡುತ್ತಾರೆ ಎಂದರೆ ಸರಿ. ದಾಳಿಗೆ ಹೋಗುವ ಪೂರ್ವದಲ್ಲಿ ಚಾಸಾ-1 ರವರು ನನಗೆ ಮೌಖಿಕವಾಗಿ ವಿಷಯ ತಿಳಿಸಿದ್ದು ಶೋಧನಾ ವಾರೆಂಟನ್ನು ಪಡೆದಿರುವುದಿಲ್ಲ. ನಮ್ಮ ಇಲಾಖೆಗೆ ಸಂಬಂಧಪಟ್ಟ 1 ಪೊಲೀಸ್ ಜೀಪು ಇರುತ್ತದೆ. ಸದರಿ ದಿನ ನಮ್ಮ ಇಲಾಖಾ ಜೀಪನ್ನು ಘಟನಾ ಸ್ಥಳಕ್ಕೆ ತೆಗೆದುಕೊಂಡು ಹೋಗಿರುವುದಿಲ್ಲ. ಖಾಸಗಿ ವಾಹನದಲ್ಲಿ ಹೋಗುವ ಬಗ್ಗೆ ನನಗೆ ಮಾಹಿತಿ ತಿಳಿಸಿರುತ್ತಾರೆ. ಸುಮಾರು ರಾತ್ರಿಃ09.45 ಗಂಟೆಗೆ ಚಾಸಾ-1 ರವರು ನನ್ನ ಮುಂದೆ ವರದಿಯನ್ನು ನೀಡಿರುತ್ತಾರೆ. ನನ್ನ ಮುಂದೆ ಮು.ಮಾ.1 ನ್ನು ಹಾಜರುಪಡಿಸುವ ಸಮಯದಲ್ಲಿ ಅದರಲ್ಲಿ ಮಧ್ಯ ಇತ್ತು. ಸದರಿ ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ ಮಧ್ಯವು ಕಾನೂನುಬದ್ದವಾಗಿ ತಯಾರಿಸಿದ ಮಧ್ಯವೇ ಎನ್ನುವ ಬಗ್ಗೆ ನಾನು ಪರಿಶೀಲನೆ ಮಾಡಿರುತ್ತೇನೆ. ಅದರ ಬ್ಯಾಚ್ ನಂಬರ್ ಗಳನ್ನು ಪರಿಶೀಲನೆ ಮಾಡಿದಾಗ ಅದು ಕಾನೂನುಬದ್ದವಾದ ಮಧ್ಯದ ಪ್ಯಾಕೇಟ್ ಗಳು ಎಂದು ತಿಳಿದಿರುತ್ತದೆ. ನಾವು ಅಭಕಾರಿ ಇಲಾಖೆಯವರಿಗೆ ಈ ಪ್ರಕರಣದ ಬಾಬ್ತು ಪತ್ರ ವ್ಯವಹಾರ ಮಾಡಿರುವುದಿಲ್ಲ. ಸದರಿ ಮಧ್ಯವು ಆರೋಪಿಗೆ ಯಾವ ರೀತಿ ಬಂತು ಎನ್ನುವ

ಬಗ್ಗೆ ನಾನು ಅಧಿಕೃತವಾಗಿ ತನಿಖೆಯನ್ನು ಮಾಡಿರುವುದಿಲ್ಲ. ತುಂಬಿದ ಮದ್ಯದ ಬಾಟಲ್ ಗಳು ಸಿಕ್ಕಿದಲ್ಲಿ ನಾವು ಆ ಕೂಡಲೇ ಮಾಲುಪಟ್ಟಿಯಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ಕಳುಹಿಸಿಕೊಡುತ್ತೇವೆ ಎಂದರೆ ಸರಿ. ಈ ದಿನ ನ್ಯಾಯಾಲಯದ ಮುಂದೆ ಇರುವ ಮು.ಮಾ.1 ರಲ್ಲಿ ಮದ್ಯ ಇರುವುದಿಲ್ಲ ಎಂದರೆ ಸಾಕ್ಷಿದಾರರು ಅದನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಸದರಿ ದಿನ ರಾಸಾಯನಿಕ ಪರೀಕ್ಷೆಗಾಗಿ ಮದ್ಯವನ್ನು ಕಳುಹಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ನನ್ನ ಮುಂದೆ ಯಾವುದೇ ವರದಿಯಾಗಲೀ ಅಥವಾ ಮದ್ಯವನ್ನಾಗಲೀ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ಕೇಸಿಗಾಗಿ ಫೋಟೋ ಹಾಗೂ ಸಿ.ಡಿ ಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ